| |
|---|
| **Deposition Sheets (RP.No.57)** Form No.4 |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 247/2022**

ಪಿಡ್ಬ್ಲೂ: 9 ಸಿಡ್ಲ್ಯೂ: 14

ಸಾಕ್ಷಿದಾರನ ಹೆಸರು : ಉಮ್ಮರ್ ಸಾಹೆಬ್

ತಂದೆಯ ಹೆಸರು : ಅಬುಬಕ್ಕರ್ ಸಾಹೇಬ್

ಪ್ರಾಯ : 68 ವರ್ಷ

ಉದ್ಯೋಗ : ಕೂಲಿ

ವಾಸ : ತೆಳ್ಳಾರು

ದಿನಾಂಕ 07.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-</u>

1 ನೇ ಆರೋಪಿಯ ಪರಿಚಯ ಇದೆ.

ಪೊಲೀಸರು ನನ್ನನ್ನು ಮಹಜರಿಗೆ ಕರೆದಿರುವುದಿಲ್ಲ. ನನ್ನ ಸಮಕ್ಷಮ ಯಾವುದೆ ಮಹಜರು ಮಾಡಿರುವುದಿಲ್ಲ. ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ, ಏನು ಬರೆದಿದೆ ಎಂದುಗೊತ್ತಿಲ್ಲ. ಈಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ಆರೋಪಿತರು ದನವನ್ನು ಕಡಿದು ಮಾಂಸ ಮಾಡಿದ ಸ್ಥಳಮಹಜರು ಆಗಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ನಿಪಿ-12 ಭಾವಚಿತ್ರದಲ್ಲಿ ನಾನು ಇದ್ದೇನೆ. ಅದನ್ನು ಯಾತಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

ನನ್ನನ್ನು ಪೊಲೀಸರು ಬೇರೆ ಕಡೆಗೆ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಮಹಜರು ಮಾಡಿರುವುದಿಲ್ಲ. ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ಆರೋಪಿ ತೋರಿಸಿಕೊಟ್ಟಂತೆ ದನ ಕಳುವು ಮಾಡಿದ ಸ್ಥಳಮಹಜರು ಆಗಿದ್ದು ಅದನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಈಗ ನೋಡಿದ ನಿಪಿ-14 ಭಾವಚಿತ್ರದಲ್ಲಿ ನಾನು ಇದ್ದೇನೆ. ಅದನ್ನು ಯಾತಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

2. ದಿಃ22.02.2021 ರಂದು ಕಾರ್ಕಳ ತಾಲೂಕು ದುರ್ಗಾ ಗ್ರಾಮದ ತೆಳ್ಳಾರು ಎಂಬಲ್ಲಿ 1 ನೇ ಆರೋಪಿ ಸಯ್ಯದ್ ಜಲಿಲ್ ಸಾಹೇಬ್ ದನವನ್ನು ಕಡಿದು ಮಾಂಸ ಮಾಡಿದ ಸ್ಥಳವನ್ನು ಇದೆ ಎಂದು ತೋರಿಸಿಕೊಟ್ಟಂತೆ ನನ್ನ ಹಾಗೂ ಚಾಸಾ-13 ರವರ ಸಮಕ್ಷಮ ಪೊಲೀಸರು ಮಧ್ಯಾಹ್ನ 1.00 ರಿಂದ 1.30 ಗಂಟೆಯವರೆಗೆ ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡಿದರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

2. ದಿಃ22.02.2021 ರಂದು ಕಾರ್ಕಳ ತಾಲೂಕು ದುರ್ಗಾ ಗ್ರಾಮದ ತೆಳ್ಳಾರು ಮಸಿದಿಯ ಬಳಿಯ ಬಸ್ಸು ನಿಲ್ದಾಣದ ಬಳಿ 1 ನೇ ಆರೋಪಿ ಸಯ್ಯದ್ ಜಲಿಲ್ ಸಾಹೇಬ್ ದನವನ್ನು ಕಳುವು ಮಾಡಿದ ಸ್ಥಳ ಇದೆ ಎಂದು ತೋರಿಸಿಕೊಟ್ಟಂತೆ ನನ್ನ ಹಾಗೂ ಚಾಸಾ-13 ರವರ ಸಮಕ್ಷಮ ಪೊಲೀಸರು ಮಧ್ಯಾಹ್ನ 1.45 ರಿಂದ 2.15 ಗಂಟೆಯವರೆಗೆ ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡಿದರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ

ಭಾವಚಿತ್ರ ತೆಗೆದಿರುತ್ತಾರೆ  ಎಂದರೆ ಸರಿಯಲ್ಲ.  ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ  ಎ ಎಸ್ ಎಂ  ವಕೀಲರಿಂದಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ